# ಬಂದದ್ದೆಲ್ಲ ಬರಲಿ ಗೋವಿಂದನ ದಯ

1. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 425.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 383.
3. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 147.
4. **Note:** Lyrics given without highlights are as per Ref. 1. The wordings given in yellow highlights are as per the singer.
5. **Note:** The wordings in Ref. 2 are a mix of Ref. 1 and Ref. 2. The wordings in Ref. 3 are slightly different and are given separately in green highlights.
6. **Note:** Singer has followed lyrics as in Ref. 1.
7. **Note:** Ankita is different in the above reference books. We have considered Ref.1 as standard and taken that Ankita for listing.

ರಾಗ: ಸುರಟಿ ತಾಳ: ಆದಿ

ಬಂದದ್ದೆಲ್ಲ ಬರಲಿ ಗೋವಿಂದನ ದಯ (ವೊಂದಿರಲಿ) ನಮಗಿರಲಿ || p ||

ಇಂದಿರೆ ರಮಣನ ಧ್ಯಾನವ ಮಾಡಲು
ಬಂದ ದುರಿತ ಬಯಲಾದುದಿಲ್ಲವೆ || ap ||

ಅರಗಿನ ಮನೆಯೊಳಗಂದು ಪಾಂಡವರನು ಕೊಲಬೇಕೆಂದು
ದುರುಳ ಕೌರವ ಬಂದು ಅತಿ ಹರುಷದಲಿರುತಿರಲಂದು
ಹರಿ ಕೃಪೆ ಅವರಲ್ಲಿದ್ದ ಕಾರಣ ಬಂದ
ಘೋರ ದುರಿತ ಬಯಲಾದುದಿಲ್ಲವೆ? || 1 ||

ಆರು ಒಲಿಯದಿರಲೆನ್ನ ಮುರಾರಿ ಎನಗೆ ಪ್ರಸನ್ನ
ಹೋರುವ ದುರಿತದ ಬನ್ನ ನಿವಾರಿಪ ಕರುಣ ಸಂಪನ್ನ
ಶ್ರೀ ರಮಣನ ಸಿರಿ ಚರಣ ಶರಣರಿಗೆ

ಕ್ರೂರ ಯಮನು ಶರಣಾಗತನಾಗಲಿಲ್ಲವೆ?     || 2 ||

ಸಿಂಗನ ಪೆಗಲೇರಿದವಗೆ ಕರಿ ಭಂಗವೇಕೆ ಮತ್ತವಗೆ
ರಂಗನ ಕೃಪೆಯುಳ್ಳವಗೆ ಭವ ಭಂಗಗಳೇತಕ್ಕವಗೆ
ಮಂಗಳ ಮಹಿಮ ಪುರಂದರ ವಿಠಲ ಶು-
ಭಾಂಗನ ದಯವೊಂದಿದ್ದರೆ ಸಾಲದೆ     || 3 ||

**Note:** The below given lyrics are as per Ref. 3 above.

ರಾಗ: ಮಧ್ಯಮಾವತಿ                    ತಾಳ: ಆದಿ

ಬಂದದ್ದೆಲ್ಲವು ಬರಲಿ ಗೋ-
ವಿಂದನ ದಯ ನಮಗಿರಲಿ     ॥ ಪಿ ॥

ಮಂದರ-ಧರ ಗೋವಿಂದ ಮುಕುಂದನ
ಸಂದರುಶನ ನಮಗೊಂದೇ ಸಾಲದೆ?     ॥ ಅಪ್ ॥

ಆರು ಅರಿಯದಿರಲೆನ್ನ ಮುರಾರಿಯು ವರದ ಪ್ರಸನ್ನ
ತೋರುವ ದುರಿತದ ಬೆನ್ನ, ಭವ ಹಾರಿ ಕೃಪಾಂಬುಧಿ ಚೆನ್ನ
ಶ್ರೀ ರಮಣನ ಶ್ರೀ ಚರಣ ಸೇವಕರಿಗೆ
ಘೋರ ಯಮನು ಶರಣಾಗತನಲ್ಲವೆ?     ॥ ೧ ॥

ಅರಗಿನ ಮನೆಯೊಳಗಂದು ಪಾಂಡವರನು ಕೊಲಬೇಕೆಂದು
ದುರುಳ ಕುರುಪ ಕಪಟದಲಿ ಹಾಕಿರುತಿರೆ ಆ ಕ್ಷಣದಲ್ಲಿ
ಹರಿ-ಕೃಪೆಯವರಲ್ಲಿದ್ದ ಕಾರಣ
ದುರಿತವೆಲ್ಲ ಬಯಲಾದುದಲ್ಲವೆ?     ॥ ೨ ॥

ಸಿಂಗನ ಪೆಗಲೇರಿದಗೆ, ಕರಿ ಭಂಗವೇಕೆ ಮತ್ತವಗೆ
ರಂಗನ ದಯವುಳ್ಳವಗೆ, ಭವ ಭಂಗದ ಭೀತಿಯ ಹಂಗೆ,
ಮಂಗಳ ಮಹಿಮ ಶ್ರೀ ಪುರಂದರ ವಿಠ್ಠಲನ
ಹಿಂಗದ ದಯವೊಂದಿದ್ದರೆ ಸಾಲದೆ     ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಭಕ್ತಿಯಿಂದ ಪೂರ್ಣ ತೃಪ್ತನಾದ ಭಕ್ತ. ತನಗೆ ಯಾವ ಭಯವು ಇಲ್ಲವೆಂಬುದನ್ನು ಸಂತಸದಿಂದ ಸಾರುತ್ತಾನೆ.

**ಹೋರುವ** – ಸೆಣಸುವ.

**ಬನ್ನ** – ಭಂಗ; ಬವಣೆ.

**ಸಿಂಗನ ಪೆಗಲೇರಿದವಗೆ** – ಸಿಂಹವನ್ನೇರಿ ಕುಳಿತವನಿಗೆ.

**ಕರಿ ಭಂಗವೇಕೆ** – ಆನೆಯಿಂದ ಕಾಟವಿದೆಯೆ?

**ಭಂಗ** = ತೊಂದರೆ, ಕಾಟ

**Classification:** Keerthane
**Ankita:** purandara vittala
**Location:** NA
**Category:** Bhakti, Vishnu Stuti
**Sub-Category:** govinda, daya, Dhyana, Vishnu, mane, pandava, kourava, santosha, Krishna, sharana, yama, gaja, simha, ranga, bhava, mangala, mukunda,
**Pravachana:** NA
**Explanation:** NA